# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

**ಗೊಟಗೋಡಿ, ರಾ.ಹೆ. –4, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ – 581 197**

## ಅಧಿಸೂಚನೆ

ಕ.ಜಾ.ವಿ.ವಿ./ ಮನ್ನಣೆ/2016–17/672 ದಿನಾಂಕ:18.08.2016

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಹೊಸದಾಗಿ ಆರಂಭಿಸಿರುವ ಪಾರಂಪರಿಕ ಕೃಷಿ ಡಿಪ್ಲೊಮಾ ಕೋರ್ಸ್‌ನ್ನು ಪ್ರಸಕ್ತ 2016–17ನೇ ಸಾಲಿನಲ್ಲಿ ನಡೆಸಲು ವಿಶ್ವವಿದ್ಯಾಲಯದಿಂದ ಮನ್ನಣೆ ಕೋರಿ ಅರ್ಜಿ ಸಲ್ಲಿಸುವಂತೆ ಸಂಘ ಸಂಸ್ಥೆ ಹಾಗೂ ಶಾಲಾ–ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕೋರ್ಸ್ | ವಿಷಯ |
|---|---|
| ಡಿಪ್ಲೊಮಾ ಕೋರ್ಸ್ | ಪಾರಂಪರಿಕ ಕೃಷಿ |

**ಸೂಚನೆಗಳು:**

1) ಮನ್ನಣೆ ಪಡೆಯಲು ಬಯಸಿದ ಸಂಘ ಸಂಸ್ಥೆ ಹಾಗೂ ಶಾಲಾ–ಕಾಲೇಜುಗಳು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **WWW.janapadauni.in** ನಲ್ಲಿ ಡೌನ್‌ಲೋಡ್ ಮಾಡಿ, ಅರ್ಜಿಯಲ್ಲಿರುವಂತೆ ಮಾಹಿತಿಗಳನ್ನು ಭರ್ತಿ ಮಾಡಿ ಮತ್ತು ಅಗತ್ಯ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ **ದಿನಾಂಕ:26.08.2016** ರೊಳಗಾಗಿ ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರ ಹೆಸರಿಗೆ ಸಲ್ಲಿಸಬೇಕು.
2) ಹೊಸದಾಗಿ ಮನ್ನಣೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಯ ಭೌತಿಕ ಪರಿಶೀಲನೆಗಾಗಿ ತೆರಳುವ ವಿಶ್ವವಿದ್ಯಾಲಯದ ಪರಿಶೀಲನಾ ಸಮಿತಿ ವೆಚ್ಚ **ರೂ. 20,000/– (ಇಪ್ಪತ್ತುಸಾವಿರ ರೂ.ಗಳು ಮಾತ್ರ)**ಗಳನ್ನು ಸಂಸ್ಥೆಯು ಅರ್ಜಿಯೊಂದಿಗೆ **ಡಿ.ಡಿ. ಮೂಲಕ ಹಣಕಾಸು ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರ ಹೆಸರಿನಲ್ಲಿ ಎಸ್.ಬಿ.ಎಂ.ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಮುಂಗಡವಾಗಿ ಪಾವತಿಸಬೇಕು.
3) ಈಗಾಗಲೇ 2016–17ನೇ ಸಾಲಿಗೆ ವಿವಿಧ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸುಗಳನ್ನು ನಡೆಸಲು ಮನ್ನಣೆ ಪಡೆದ ಸಂಸ್ಥೆಯು ಪಾರಂಪರಿಕ ಕೃಷಿ ಡಿಪ್ಲೊಮಾ ಕೋರ್ಸನ್ನು ನಡೆಸಲು ಬಯಸಿದಲ್ಲಿ ತಮ್ಮ ಸಂಸ್ಥೆಯನ್ನು ಪುನರ್‌ಪರಿಶೀಲಿಸಲು ಪರಿಶೀಲನಾ ಸಮಿತಿ ವೆಚ್ಚ ರೂ. 10,000/– (ಹತ್ತು ಸಾವಿರ ರೂ.ಗಳು ಮಾತ್ರ)ಗಳನ್ನು ವಿಶ್ವವಿದ್ಯಾಲಯಕ್ಕೆ ಅರ್ಜಿಯೊಂದಿಗೆ **ಡಿ.ಡಿ. ಮೂಲಕ ಹಣಕಾಸು ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರ ಹೆಸರಿನಲ್ಲಿ ಎಸ್.ಬಿ.ಎಂ.ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಮುಂಗಡವಾಗಿ ಪಾವತಿಸಬೇಕು.

ಕುಲಸಚಿವರು